ಕರ್ನಾಟಕ ವಿಧಾನ ಪರಿಷತ್ತು

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	740 (786)
2	ಸದಸ್ಯರ ಹೆಸರು	:	ಶ್ರೀ ಎಸ್.ನಾಗರಾಜ್ (ಸಂದೇಶ್ ನಾಗರಾಜ್)
3	ಉತ್ತರಿಸಬೇಕಾದ ದಿನಾಂಕ	:	09-03-2021
4	ಉತ್ತರಿಸುವ ಸಚಿವರು	:	ಮಾನ್ಯ ನಗರಾಭಿವೃದ್ಧಿ ಸಚಿವರು

ಕ್ರ. ಸಂ.	ಪ್ರಶ್ನೆಗಳು	ಉತ್ತರ
ಅ)	ಚಾಮರಾಜನಗರದಲ್ಲಿ ಒಳಚರಂಡಿ ನಿರ್ಮಾಣ ಕಾಮಗಾರಿ ಪೂರ್ಣಗೊಂಡಿದೆಯೇ?	ಚಾಮರಾಜನಗರ ನಗರಸಭೆ ವ್ಯಾಪ್ತಿಯಲ್ಲಿ ಒಳಚರಂಡಿ ವ್ಯವಸ್ಥೆಯ ಮೊದಲನೇ ಹಂತದ ಕಾಮಗಾರಿ ಡಿಸೆಂಬರ್-2018 ರಲ್ಲಿ ಪೂರ್ಣಗೊಂಡಿರುತ್ತದೆ.
ಆ)	ನಗರದ ಎಲ್ಲಾ ಮನೆಗಳಿಗೆ ನೂತನ ಒಳಚರಂಡಿ ಸಂಪರ್ಕ ಕಲ್ಪಿಸದಿರಲು ಕಾರಣಗಳೇನು;	ಚಾಮರಾಜನಗರ ಪಟ್ಟಣದಲ್ಲಿ ಒಟ್ಟು 16,190 ಮನೆಗಳಿದ್ದು, ಇದುವರೆವಿಗೂ 9,610 ಮನೆಗಳಿಗೆ ಒಳಚರಂಡಿ ಸಂಪರ್ಕವನ್ನು ಕಲ್ಪಿಸಲಾಗಿರುತ್ತದೆ. ಉಳಿಕೆ ಮನೆಗಳ ಸಂಪರ್ಕವನ್ನು ಹಂತ ಹಂತವಾಗಿ ಕಲ್ಪಿಸಲಾಗುವುದು. ಅಲ್ಲದೇ, ಒಳಚರಂಡಿ ಗೃಹ ಸಂಪರ್ಕವನ್ನು ಪಡೆಯಲು ಸಂಬಂಧಪಟ್ಟ ಮನೆ ಮಾಲೀಕರೆ ಸ್ವಂತ ಖರ್ಚಿನಲ್ಲಿ ಭರಿಸಿಕೊಳ್ಳಬೇಕಾಗಿದ್ದು, ಈಗಾಗಲೇ ನಗರಸಭೆ ವತಿಯಿಂದ ಒಳಚರಂಡಿ ಗೃಹ ಸಂಪರ್ಕ ಪಡೆದುಕೊಳ್ಳಲು ಮನೆ ಮಾಲೀಕರುಗಳಿಗೆ ತಿಳುವಳಿಕೆ ನೋಟೀಸ್ ನೀಡಲಾಗಿದೆ.
ಇ)	ನಗರದಲ್ಲಿ ತೆರೆದ ಚರಂಡಿ ನೀರು ಬೀದಿಗಳಲ್ಲಿ ಹರಿಯುತ್ತಿದು, ಕಲುಷಿತ ಅನೈರ್ಮಲ್ಯಕರ ವಾತಾವರಣ ಉಂಟಾಗಿರುವುದರಿಂದ ಕೂಡಲೇ ನಗರದ ಎಲ್ಲಾ ಮನೆಗಳಿಗೆ ಒಳಚರಂಡಿ ಸಂಪರ್ಕ ಕಲ್ಪಿಸಲು ಕ್ರಮ ತೆಗೆದುಕೊಳ್ಳಲಾಗುವುದೇ?	ನಗರದ ಎಲ್ಲಾ ಮನೆಗಳಿಗೆ ಒಳಚರಂಡಿ ಗೃಹ ಸಂಪರ್ಕವನ್ನು ಡಿಸೆಂಬರ್-2021ರೊಳಗೆ ಪೂರ್ಣಗೊಳಿಸಲು ಕ್ರಮಕೈಗೊಳ್ಳಲಾಗುತ್ತಿದೆ. ಬಾಕಿ ಇರುವ ಎಲ್ಲಾ ಮನೆಗಳಿಗೆ ಒಳಚರಂಡಿ ಸಂಪರ್ಕ ಕಲ್ಪಿಸುವ ಕಾಮಗಾರಿಯು ಪೂರ್ಣಗೊಂಡಲ್ಲಿ ತೆರದ ಚರಂಡಿಯ ಮೂಲಕ ಹರಿಯುತ್ತಿರುವ ಕಲುಷಿತ ನೀರನ್ನು ಸಂಪೂರ್ಣವಾಗಿ ತಪ್ಪಿಸಲಾಗುತ್ತದೆ.

ಕಡತ ಸಂಖ್ಯೆ:ನಅಇ 61 ಪಿ.ಆರ್.ಜೆ 2021

(ಎನ್.ನಾಗರಾಜ್, ಎಂ.ಟಿ.ಬಿ)
ಪೌರಾಡಳಿತ ಹಾಗೂ ಸಕ್ಕರೆ ಸಚಿವರು